Govt. of Karnataka ಅನುಬಂಧ-ಎ [C.R.P. 67

Deposition Sheets
(R.P. No. 57)
Form No. 4
(Criminal)

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ,ಶಿರಾ.**
**ಪ್ರಕರಣ ಸಂಖ್ಯೆ: ಸಿ.ಸಿ: 21/2022**

| **ದಿನಾಂಕ 23.12.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.** | | | |
|---|---|---|---|
| **C.W.** | **5** | **P.W.** | **3** |
| **ಹೆಸರು** | ರಂಗನಾಥ ಎಂ.ಎಸ್ | | |
| **ತಂದೆಯ/ಗಂಡನ ಹೆಸರು** | ಸಿದ್ದಪ್ಪ | | |
| **ವಯಸ್ಸು** | 51 | | |
| **ಉದ್ಯೋಗ** | ಹಿರಿಯ ಪ್ರಾಥಮಿಕ ಪಾಠ ಶಾಲೆ, ಮುದಿಮಡು, ಶಿಕ್ಷಕರು | | |
| **ವಾಸ** | ಮಾಯಸಂದ್ರ, ಶಿರಾ ತಾಲ್ಲೂಕು | | |

**ಮುಖ್ಯವಿಚಾರಣೆ: ಎ.ಪಿ.ಪಿ. ರವರಿಂದ:**

1. ನಾನು 2010 ರಿಂದ ನಾನು ಶಿಕ್ಷಕರನಾಗಿ ಮುದಿಮಡು ಸರ್ಕಾರಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದು, 2021 ನೇ ಶಿರಾ ನಗರ ಸಭೆ ಚುನಾವಣೆ ಪ್ರಯುಕ್ತ ನಾನು 2 ನೇ ಪೋಲಿಂಗ್ ಆಫೀಸರ್ ಆಗಿ ನಿಯೋಜನೆಗೊಂಡಿದ್ದು, ನನ್ನ ಜೊತೆ ಚಾ.ಸಾ. 2 ರಿಂದ 4 ರವರೂ ಸಹ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದು, 27.12.2021 ರಂದು ನಿಗದಿ ಮಾಡಿದ್ದು, ನಾನು 26.12.2021 ರಂದು ಕರ್ತವ್ಯ ನಿಮಿತ್ತ ನಾನು ರಾತ್ರಿ ಸರ್ಕಾರಿ ಉರ್ದು ಶಾಲೆಯಲ್ಲಿ ತಾಲ್ಲೂಕು ಕಛೇರಿಯಿಂದ ಸಾಮಾಗ್ರಿಗಳನ್ನು ತೆಗೆದುಕೊಂಡು ಬಂದು ಮೊಖಂ ಹೂಡಿದ್ದು, 27.12.2021 ರಂದು ಬೆಳಗ್ಗೆ 7.00 ಗಂಟೆಗೆ ಮತದಾನ ಪ್ರಾರಂಭವಾಗಿರುತ್ತದೆ. ಶಾಂತಿಯುತವಾಗಿ ಮಧ್ಯಾಹ್ನ 2.00 ಗಂಟೆಯವರಗೂ ನಡೆದಿರುತ್ತದೆ. ಆಯುಬ್ ಖಾನ್ ಎನ್ನುವ ವ್ಯಕ್ತಿ ಮಧ್ಯಾಹ್ನ ಮತದಾನ ಕೇಂದ್ರಕ್ಕೆ ಹಾಜರಾಗಿದ್ದು, ಆತನ ಮತ ಸಂಖ್ಯೆಯನ್ನು ಪರಿಶೀಲಿಸಲಾಗಿ, ಅದರ ಸಂಖ್ಯೆ 427 ಆಗಿದ್ದು, ಆತ ಪಕ್ಷದ ಏಜೆಂಟ್ ರವರಿಂದ ಗುರ್ತಿಸಲ್ಪಟ್ಟಿದ್ದು, ಆತ ಮತದಾನ ಮಾಡಲು ಅವಕಾಶ ನೀಡಲಾಯಿತು. ಮತದಾನ ಆದ ನಂತರ ಬೇರೆ ಪಕ್ಷದ ಏಜೆಂಟ್ ರವರು ಈತ ಆಯುಬ್ ಖಾನ್ ಅಲ್ಲ ಮಹಮದ್ ಸಾಧಿಕ್ ಎಂದು ಗುರುತಿಸಿ, ಮತದಾನದ ಪಟ್ಟಿಯಲ್ಲಿ ಆತನ ಹೆಸರು ಇಲ್ಲ ಎಂದು ತಕರಾರು

ತಂದಿರುತ್ತಾರೆ. ನಂತರ ಚಾ.ಸಾ. 1 ರವರು ಈ ಬಗ್ಗೆ ಸೂಕ್ತ ಕ್ರಮ ಕೊಡಲು ದೂರನ್ನು ಕೊಟ್ಟಿರುತ್ತಾರೆ. ಪೊಲೀಸರ ಸಮಕ್ಷಮ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಆ ದಿನ ಆಯುಬ್ ಖಾನ್ ಹೆಸರಿನಲ್ಲಿ ಮತ ಚಲಾಯಿಸಿದ ವ್ಯಕ್ತಿ ಎಂದು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ- ಆರೋಪಿ ಪರ ಶ್ರೀ ವಕೀಲರಿಂದಃ</u>**

1. ನಾನು 2 ನೇ ಪೋಲಿಂಗ್ ಆಫೀಸರ್ ಆಗಿದ್ದು. ಮತದಾನವಾಗುವಾಗಿ 1 ಪಿ.ಆರ್ ಮತ್ತು 3 ಪೋಲಿಂಗ್ ಆಫೀಸರ್ ಗಳು ಇರುತ್ತಾರೆ ಎಂದರೆ ಸರಿ. ಮತದಾ ಮೊದಲು 1 ನೇ ಪೋಲಿಂಗ್ ಆಫೀಸರ್ ಬಳಿ ಹೋಗುತ್ತಾರೆ ಎಂದರೆ ಸರಿ. 1 ನೇ ಪೋಲಿಂಗ್ ಆಫೀಸರ್ ಮತದಾರರ ಐ.ಡಿ ಕಾರ್ಡ್ ನಲ್ಲಿ ಇರುವ ವಿಚಾರಗಳನ್ನು ಮತ್ತು ಮುಖಚರಿಯನ್ನು ನೋಡಿ ವ್ಯಕ್ತಿಯನ್ನು ಗುರುತು ಹಿಡಿಯುತ್ತಾರೆ ಎಂದರೆ ಸರಿ. ಅವರಿ ಬಳಿ ಇರುವ ಓಟಿಂಗ್ ಲಿಸ್ಟ್ ನಲ್ಲಿ ಮತದಾರರು ಗಂಡಸರಾದ ಹೆಸರಿನ ಕೆಳಗೆ ಗೆರೆ ಎಳೆಯುತ್ತಾರೆ, ಹೆಂಗಸರಾದರೆ ಅವರ ಹೆಸರನ್ನು ರೌಂಡ್ ಮಾಡುತ್ತಾರೆ ಎಂದರೆ ಸರಿ. ಸದರಿ ಮತದಾರರ ಪಟ್ಟಿ 1 ನೇ ಪೋಲಿಂಗ್ ಆಫೀಸರ್ ಬಳಿ ಇರುತ್ತದೆ ಎಂದರೆ ಸರಿ, ಅದನ್ನು ಮಾರ್ಕಡ್ ಕಾಪಿ ಎಂದು ನುಡಿಯುತ್ತಾರೆ ಎಂದರೆ ಸರಿ.
2. ತದನಂತರ 2 ನೇ ಪೋಲಿಂಗ್ ಆಫೀಸರ್ ಇರುತ್ತಾರೆ, ಅವರ ಹತ್ತಿರ ಬ್ಯಾಲೆಟ್ ಪುಸ್ತಕ ಇದ್ದು, ಓಟರ್ ಲಿಸ್ಟ್ ಸಂಖ್ಯೆ ಬರೆದುಕೊಂಡು, ಮತದಾರರ ಕ್ರಮ ಸಂಖೆಯನ್ನು ನಮೂದು ಮಾಡಿಕೊಂಡು ಮತದಾನ ಮಾಡಲು ಬಂದವರ ಸಹಿಯನ್ನು ಪಡೆಯುತ್ತಾರೆ ಎಂದರೆ ಸರಿ, ಅದೆಲ್ಲವೂ ಕೌಂಟರ್ ಫೈಲ್ ನಲ್ಲಿ ಇರುತ್ತದೆ ಎಂದರೆ ಸರಿ. ಅದಾದ ನಂತರ 2 ನೇ ಪೋಲಿಂಗ್ ಆಫೀಸರ್ ಬೆರಳಿಗೆ ಇಂಕ್ ಹಚ್ಚುತ್ತಾರೆ ಎಂದರೆ ಸರಿಯಲ್ಲ, 3 ನೇ ಪೋಲಿಂಗ್ ಆಫೀಸರ್ ಇಂಕ್ ಹಚ್ಚುತ್ತಾರೆ ಎಂದು ನುಡಿಯುತ್ತಾರೆ. 3 ನೇ ಪೋಲಿಂಗ್ ಆಫೀಸರ್ ಇಂಕ್ ನ್ನು ಹಚ್ಚಿ ಬ್ಯಾಲೆಟ್ ಪೇಪರ್ ನ್ನು ಮಡಿಚಿಕೊಡುತ್ತಾರೆ ಎಂದರೆ ಸರಿ.
3. ಯವ ಪಕ್ಷದ ಏಜೆಂಟ್ ಆರೋಪಿಯು ಆಯುಬ್ ಖಾನ್ ಅಲ್ಲ ಎಂದು ತಿಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಚುನಾವಣೆಯ ಪ್ರಕಾರ ಮತದಾನ ಮಾಡುವವರ ಗುರುತಿನ ಬಗ್ಗೆ ತಕರಾರು ತೆಗೆದಲ್ಲಿ ಏಜೆಂಟ್ ರವರು ರೂ.2 ಕೊಟ್ಟು ರಸೀದಿಯನ್ನು ಹಾಕಬೇಕು ಎಂದರೆ

ಸರಿ. ಅವರ ತಕರಾರು ಸತ್ಯವಾಗಿದ್ದಲ್ಲಿ ಅದನ್ನು ಪರಿಶೀಲನೆ ಮಾಡಿ ಹಣ ವಾಪಸ್ಸು ಕೊಡಲಾಗುತ್ತದೆ ಎಂದರೆ ಸರಿ. ಆ ದಿನ ಯಾವುದೇ ರಸೀದಿಯನ್ನು ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ, ಅದು ಪಿ.ಆರ್.ಓ ಗೆ ಮಾಹಿತಿ ಗೊತ್ತಿರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಆ ದಿನ ಮತದಾನವನ್ನು ಮಾಡಲು ಬಂದಿಲ್ಲ, ಮತದಾನವನ್ನು ಮಾಡಿಲ್ಲ ಎಂದರೆ ಸರಿಯಲ್ಲ. 2021 ರಲ್ಲಿ ಬಿ.ಜೆ.ಪಿ. ಎಂ.ಎಲ್.ಎ ಇದ್ದರು ಎಂದರೆ ಸರಿ. ಆರೋಪಿಯ ಅತ್ತೆ ಕಾಂಗ್ರೆಸ್ ಪಕ್ಷದ ವತಿಯಿಂದ ನಿಂತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾವು ಲೋಕಲ್ ಬಿ.ಜೆ.ಪಿ ರವರ ಮಾತನ್ನು ಕೇಳಿಕೊಂಡು ಆರೋಪಿಯ ವಿರುದ್ಧ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು) **ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**